# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಉತ್ತರ ಕರ್ನಾಟಕದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ (ಕಮೀಷನರೇಟ್)ಗಳನ್ನು ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ದಿನಾಂಕ 21.3.2003ರಂದು ಮಾನ್ಯ ಮುಖ್ಯ ಮಂತ್ರಿಯವರು ವಿಧಾನ ಮಂಡಲದಲ್ಲಿ ಮಂಡಿಸಿದ 2003-04ನೇ ಸಾಲಿನ ಆಯವ್ಯಯ ಭಾಷಣ
2. ಸರ್ಕಾರಿ ಆದೇಶ ಸಂಖ್ಯೆ.ಡಿಪಿಎಆರ್ 11ಎಸ್‌ಎಎಸ್ 2003 ದಿನಾಂಕ 17.4.2003
3. ಪುನರ್‌ವಸತಿ ಮತ್ತು ಭೂಸ್ವಾಧೀನ, ಕೃಷ್ಣಾ ಮೇಲ್ದಂಡೆ ಯೋಜನೆಯ ಆಯುಕ್ತರು ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಮತ್ತು ವಿಶೇಷಾಧಿಕಾರಿಗಳು ಇವರ ಪತ್ರ ಸಂಖ್ಯೆ.ಸಿಬಿಎಂಎಂಆರ್/ಸಿಪಿಐ/ 2003-04 ದಿನಾಂಕ.3.5.2003

------

ಪ್ರಸ್ತಾವನೆ:-

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಮೇಲೆ(1)ರಲ್ಲಿ ಓದಲಾದಂತೆ ಮಾನ್ಯ ಮುಖ್ಯಮಂತ್ರಿಯವರು 2003-04ನೇ ಸಾಲಿನ ಆಯವ್ಯಯವನ್ನು ವಿಧಾನಮಂಡಲದಲ್ಲಿ ದಿ:21-3-2003ರಂದು ಮಂಡಿಸಿದಾಗ ಉತ್ತರ ಕರ್ನಾಟಕದ ಅಭಿವೃದ್ಧಿ ಹಾಗೂ ಅಧಿಕಾರ ವಿಕೇಂದ್ರೀಕರಣದ ಸರ್ಕಾರದಪ್ರಯತ್ನವನ್ನು ಮುಂದುವರೆಸುವ ನಿಟ್ಟಿನಲ್ಲಿ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕದ ಶಾಲೆಗಳಿಗಾಗಿ ಪ್ರತ್ಯೇಕವಾಗಿ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಯನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸುವುದಾಗಿ ಘೋಷಿಸಿದರು. ಮೇಲೆ(2)ರಲ್ಲಿ ಓದಲಾದ ದಿ:17-4-2003ರ ಆದೇಶದಲ್ಲಿ ಈ ಸಂಬಂದವಾಗಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ನೀಡಲು ಕೃಷ್ಣಾ ಮೇಲ್ದಂಡೆ ಯೋಜನೆಯ ಆಯುಕ್ತರು(ಪುನರ್ ವಸತಿ ಮತ್ತು ಭೂ ಸ್ವಾಧಿನ)ಹಾಗೂ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ ಇವರನ್ನು ವಿಶೇಷಾಧಿಕಾರಿಗಳಾಗಿ ನೇಮಿಸಲಾಯಿತು. ಮೇಲೆ(3)ರಲ್ಲಿ ಓದಲಾದ ದಿನಾಂಕ:3-5-2003ರ ಅರೆ ಸರ್ಕಾರಿ ಪತ್ರದಲ್ಲಿ ವಿಶೇಷಾಧಿಕಾರಿಗಳು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.ಸದರಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ವಿವರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 163 ಯೋಯೋಕಾ 2003,ಬೆಂಗಳೂರು,ದಿ:10-11-2003**

**(ಇಡಿ:151:ಸ್ಕೀಮರ (ಯೂನಿಕ್)2003,ದಿನಾಂಕ:10-11-2003)**

ರಾಜ್ಯದ ಉತ್ತರ ಕರ್ನಾಟಕದ ಹಾಲಿ ಬೆಳಗಾಂ ಕಂದಾಯ ವಿಭಾಗದ ಪ್ರದೇಶಗಳನ್ನು ಹಾಗೂ ಹಾಲಿ ಗುಲ್ಬರ್ಗಾ ಕಂದಾಯ ವಿಭಾಗಗಳ ಪ್ರದೇಶಗಳನ್ನು ಒಳಗೊಂಡಂತೆ ಕ್ರಮವಾಗಿ ಎರಡು ಹೆಚ್ಚುವರಿ ಸಾರ್ವಜನಿಕ ಶಿಕ್ಷಣ ಆಯುಕ್ತಾಲಗಳನ್ನು ಸ್ಥಾಪಿಸಲು ಸರ್ಕಾರವು ಮಂಜೂರಾತಿ ನೀಡಿದೆ. ಈ ಹೆಚ್ಚುವರಿ ಆಯುಕ್ತಾಲಯಗಳ ವ್ಯಾಪ್ತಿಗೆ ಬೆಳಗಾಂ, ಹಾಗೂ ಗುಲ್ಬರ್ಗಾ, ಕಂದಾಯ ವಿಭಾಗಗಳಿಗೆ ಒಳಗೊಂಡ ಜಿಲ್ಲೆಗಳು ಕ್ರಮವಾಗಿ ಬರುತ್ತವೆ.ಇದಕ್ಕಾಗಿಗುಲ್ಬರ್ಗಾದಲ್ಲಿಈಗಾಗಲೇ ಇರುವ ನಿರ್ದೇಶನಾಲಯವನ್ನು ಮೇಲ್ದರ್ಜೆಗೆ ಏರಿಸಲಾಗಿದೆ.

2. ಈ ಹೊಸ ಆಯುಕ್ತಾಲಯಗಳ ಸ್ಥಾಪನೆಗೆ ಸಂಬಂಧಿಸಿಸಲು ಅನುಬಂಧ-1ರಲ್ಲಿ ವಿವಿಧ ಪ್ರವರ್ಗಗಳ ಹೊಸ ಹುದ್ದೆಗಳನ್ನು ಸೃಜಿಸಲು ಮಂಜೂರಾತಿ ನೀಡಲಾಗಿದೆ. ಈ ಸೃಜಿಸಲಾದ ಹುದ್ದೆಗಳನ್ನು ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯದಲ್ಲಿರುವ ಸಮಾನ ಹುದ್ದೆಗಳನ್ನು ಭರ್ತಿ ಮಾಡಲು ಅನುಸರಿಸುತ್ತಿರುವ ವಿಧಿವಿಧಾನಗಳಂತೆಯೇ ಭರ್ತಿ ಮಾಡಬೇಕು. ಅಲ್ಲದೆ ಹೊಸ ಕಾರ್ಯಾಲಯಗಳಿಗೆ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯದಿಂದ ಅನುಬಂಧ-2ರಲ್ಲಿ ಲಗತ್ತಿಸಿರುವ ವಿವಿಧ ಪ್ರವರ್ಗಗಳ ಹುದ್ದೆಗಳನ್ನು ಸ್ಥಳಾಂತರಿಸಲು ಸಹ ಸರ್ಕಾರವು ಅನುಮೋದನೆ ನೀಡಿದೆ. ಈ ಹುದ್ದೆಗಳನ್ನು ಕೂಡಲೇ ಸ್ಥಳಾಂತರಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ಇವರು ಕ್ರಮ ಕೈಗೊಳ್ಳತಕ್ಕದ್ದು.

3. ಈ ಆಯುಕ್ತಾಲಯಗಳನ್ನು ಧಾರವಾಡದಲ್ಲಿ ಹಾಲಿ ಲಭ್ಯವಿರುವ ಸರ್ಕಾರಿ ಕಟ್ಟಡದಲ್ಲಿ ಹಾಗೂ ಗುಲ್ಬರ್ಗಾದಲ್ಲಿ ಹಾಲಿ ಈಶಾನ್ಯ ವಲಯದಲ್ಲಿ ನಿರ್ದೇಶನಾಲಯ ನಡೆಯುತ್ತಿರುವ ಸರ್ಕಾರಿ ಕಟ್ಟಡದಲ್ಲಿ ಸ್ಥಾಪಿಸತಕ್ಕದ್ದು.

4. ಈ ಎರಡೂ ಆಯುಕ್ತಾಲಯಗಳ ಅಪರ ಆಯುಕ್ತರುಗಳು ತಮ್ಮ ಅಧಿಕಾರ ವ್ಯಾಪ್ತಿಯ ರೆವಿನ್ಯೂ ವಿಭಾಗಕ್ಕೆ ಸಂಬಂಧಿಸಿದ ಜಿಲ್ಲೆಗಳಲ್ಲಿನ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಹಾಗೂ ಶಿಕ್ಷಣ ಸಂಸ್ಥೆಗಳ ಎಲ್ಲಾ ವಿಷಯಗಳನ್ನು ಸಂಬಂಧಿಸಿದ ವಿಷಯಗಳ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಹೊಂದಿರುವ ಎಲ್ಲಾ ಅಧಿಕಾರಿಗಳನ್ನು ಹೊಂದಿರುತ್ತಾರೆ ಎಂದು ಆದೇಶ ನೀಡಿದೆ. ಇವರುಗಳನ್ನು ಬೃಹತ್ ಇಲಾಖಾ ಮುಖ್ಯಸ್ಥರು ಎಂದೂ ಘೋಷಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಾಗೆಯೇ ಈ ಕಾರ್ಯಾಲಯಗಳಲ್ಲಿರುವ ನಿರ್ದೇಶಕರುಗಳಿಗೂ ಸಹ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವಲಯಗಳ ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಇತ್ಯರ್ಥಗೊಳಿಸುವ ಅಧಿಕಾರ ನೀಡಿದೆ ಎಂದೂ ಆದೇಶಿಸಿದೆ.

5.ಮೇಲಿನ ಆಯುಕ್ತಾಲಯಗಳಿಗೆ ಕೆಳಗೆ ನಮೂದಿಸಿರುವಂತೆ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಾರ್ಯಾಲಯದಿಂದ ಈ ಕೆಳಕಂಡ ವಸ್ತುಗಳನ್ನು ಕೂಡಲೇ ವರ್ಗಾಯಿಸಲು ಸಾರ್ವಜನಿಕ ಶಿಕ್ಷಣ ಆಯುಕ್ತರು ಕ್ರಮ ತೆಗೆದುಕೊಳ್ಳತಕ್ಕದ್ದು.

| | ಧಾರವಾಡ | ಗುಲ್ಬರ್ಗಾ | ಒಟ್ಟು |
|---|---|---|---|
| ಅ) ವಾಹನಗಳು (ಚಾಲಕರುಗಳ ಹುದ್ದೆಗಳ ಸಮೇತ) | 2 | 1 | 3 |
| ಆ) ದೂರವಾಣಿ ಸಂಪರ್ಕಗಳು | 3 | – | 3 |
| ಇ) ಕಂಪ್ಯೂಟರ್‌ಗಳು/ಪ್ರಿಂಟರ್‌ಗಳು | 20 | 5 | 25 |

6. ಕೆಳಗೆ ನಮೂದಿಸಿರುವ ಅಂಶಗಳನ್ನು ಅನುಷ್ಠಾನಗೊಳಿಸಲು ಆಯಾ ವಿಭಾಗಗಳಿಗೆ ಸಂಬಂಧಿಸಿದಂತೆ ಆಯಾ ಅಪರ ಆಯುಕ್ತರುಗಳಿಗೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

| ವಿವಿಧ ಅಂಶಗಳು | ಧಾರವಾಡ | ಗುಲ್ಬರ್ಗಾ |
|---|---|---|
| ಅ) ವಾಹನಗಳು (ಔಟ್ ಸೋರ್ಸ್ ಮುಖಾಂತರ ಹೊಂದಲು) | ರೂ. 5 ಲಕ್ಷ ಮೂರು ವಾಹನಗಳು | ರೂ.3 ಲಕ್ಷ ಎರಡು ವಾಹನಗಳು |
| ಆ) ದೂರವಾಣಿಗಳು | ರೂ. 2 ಲಕ್ಷ ಹತ್ತು ಸಂಪರ್ಕಗಳು | ರೂ. 1 ಲಕ್ಷ ಐದು ಸಂಪರ್ಕಗಳು |
| ಇ) ಫ್ಯಾಕ್ಸ್, ಝೆರಾಕ್ಸ್, ಕಂಪ್ಯೂಟರ್ ಇತ್ಯಾದಿಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಈ) ಪೀಠೋಪಕರಣಗಳು ಮತ್ತು ಅಳವಡಿಕೆಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಉ) ದುರಸ್ತಿ ಮತ್ತು ಬದಲಾವಣೆಗಳು | ರೂ. 5 ಲಕ್ಷ | ರೂ. 5 ಲಕ್ಷ |
| ಊ) ಸ್ಟ್ಯಾಂಪುಗಳು, ಲೇಖನ ಸಾಮಗ್ರಿ ಮತ್ತು ಇತರೆ ಸಾದಿಲ್ವಾರು | ರೂ. 6 ಲಕ್ಷ | ರೂ. 5 ಲಕ್ಷ |
| ಋ) ಸಿಬ್ಬಂದಿ ಪ್ರವಾಸ ಭತ್ಯೆ ಮತ್ತು ತುಟ್ಟಿಭತ್ಯೆಗಳಿಗಾಗಿ | ರೂ. 2 ಲಕ್ಷ | ರೂ. 2 ಲಕ್ಷ |
| ಎ) ಬಾಡಿಗೆ, ದರ ಮತ್ತು ತೆರಿಗೆಗಳು | ರೂ. 2 ಲಕ್ಷ | ರೂ. 2 ಲಕ್ಷ |
| ಒಟ್ಟು | ರೂ. 32 ಲಕ್ಷ | ರೂ. 26 ಲಕ್ಷ |

ರೂ. ಹದಿನೇಳು ಲಕ್ಷಗಳ ಮಿತಿಯೊಳಗೇ ಮೇಲಿನ ವೆಚ್ಚಗಳನ್ನು ಭರಿಸಲು ಸಂಬಂಧಿಸಿದ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರಿಗೆ ಸರ್ಕಾರದ ಅನುಮೋದನೆ ನೀಡಿದೆ.

7. ಅಂತಹ ಕಾರ್ಯಾಲಯಗಳಿಗೆ ಅನ್ವಯಿಸುವಂತೆ ಸರ್ಕಾರಿ ಹಾಗೂ ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆದೇಶಗಳನ್ನು / ಸುತ್ತೋಲೆಗಳನ್ನು ಹೊರಡಿಸುವ / ತಿದ್ದುಪಡಿ ಮಾಡುವ ವಿಷಯದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರು ಹೊಂದಿರುವ ಎಲ್ಲಾ ಆರ್ಥಿಕ, ಕಾರ್ಯನಿರ್ವಹಣಾ ಮತ್ತು ಶಿಸ್ತು ಅಧಿಕಾರಗಳನ್ನು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಅಪರ ಆಯುಕ್ತರು,ಸಾರ್ವಜನಿಕ ಶಿಕ್ಷಣ ಇಲಾಖೆ,ಗುಲ್ಬರ್ಗಾ ಇವರಿಗೆ ನೀಡಿದೆ. ತತ್ಸಂಬಂಧ ಹೊರಡಿಸಬೇಕಾದ ಆದೇಶಗಳನ್ನು ಹೊರಡಿಸಲೂ ಸಂಬಂಧಿಸಿದ ಇಲಾಖೆಗಳು ಕ್ರಮ ಕೈಗೊಳ್ಳುವುದು.

8. ಅಪರ ಆಯುಕ್ತರು ಧಾರವಾಡ ಇವರು ಸಂಬಂಧಿಸಿದ ವೆಚ್ಚವನ್ನು ಆಯವ್ಯಯ ಶೀರ್ಷಿಕೆ 2202-02-001-0-03-051-ಸಾಮಾನ್ಯವೆಚ್ಚಗಳು-ಅಡಿಯಲ್ಲಿ ಮತ್ತು ಅಪರ ಆಯುಕ್ತರುಗುಲ್ಬರ್ಗಾ ಇವರು ಆಯವ್ಯಯ ಲೆಕ್ಕಶೀರ್ಷಿಕೆ 2202-02-001-0-05-051-ಸಾಮಾನ್ಯವೆಚ್ಚಗಳು-ಅಡಿಯಲ್ಲಿ ಭರಿಸತಕ್ಕದ್ದು. ಈ ಆದೇಶವನ್ನು ಯೋಜನೆ ಮತ್ತು ಆರ್ಥಿಕ ಇಲಾಖೆಗಳು ಕ್ರಮವಾಗಿ ತಮ್ಮ ಅ.ಟಿ.ಸಂಖ್ಯೆ: ಯೋಇ 80 ಜಿಪಿ 2003 ದಿನಾಂಕ 25.6.2003 ಮತ್ತು ಆಇ 682 ವೆಚ್ಚ 8/2003 ದಿನಾಂಕ 5.9.2003ರಲ್ಲಿ ನೀಡಿರುವ ಸಹಮತಿಯನ್ವಯ ಮತ್ತು ಅ.ಟಿ.ಸಂಖ್ಯೆ:ಆಇ:1068-ವೆಚ್ಚ-8/2003/ದಿನಾಂಕ:10-11-2003 ರಲ್ಲಿ ನೀಡಿರುವ ಅಭಿಪ್ರಾಯದನ್ವಯ ಹೊರಡಿಸಲಾಗಿದೆ.

ಕರ್ನಾಟಕದ ಘನವೆತ್ತ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಉಪ ಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ

ಇವರಿಗೆ

1. ಮಹಾಲೇಖಪಾಲರು,ಕರ್ನಾಟಕ-1 ಮತ್ತು 2 ಬೆಂಗಳೂರು
2. ಆಯುಕ್ತರು ,ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಕೃಷ್ಣ ಮೇಲ್ದಂಡೆ ಯೋಜನೆಯ ಆಯುಕ್ತರು, ಪುನರ್ವಸತಿ ಮತ್ತು ಭೂಸ್ವಾಧೀನ ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಹಾಗೂ ವಿಶೇಷಾಧಿಕಾರಿಗಳು, ನವನಗರ, ಬಾಗಲಕೋಟೆ
4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,ವಿಧಾನ ಸೌಧ,ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ,ವಿಧಾನ ಸೌಧ,ಬೆಂಗಳೂರು
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ,ಬೆಂಗಳೂರು
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ,ಕರ್ನಾಟಕ ಸರ್ಕಾರದ ಸಚಿವಾಲಯ,ಬೆಂಗಳೂರು
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ಬೆಂಗಳೂರು
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,ಸಿ ಆ ಸು ಇ ,ವಿಧಾನ ಸೌಧ,ಬೆಂಗಳೂರು

10. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು,ವಿಧಾನ ಸೌಧ,ಬೆಂಗಳೂರು.
11. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
12. ಸರ್ಕಾರದ ಉಪ ಕಾರ್ಯದರ್ಶಿ-2,ಆರ್ಥಿಕ ಇಲಾಖೆ,ಬೆಂಗಳೂರು.
13. ನಿರ್ದೇಶಕರು, ಯೋಜನಾ ಇಲಾಖೆ(ಜನಶಕ್ತಿ ಮತ್ತು ಉದ್ಯೋಗ ವಿಭಾಗ), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.
13. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ,ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ,ಸಿ.ಆ.ಸು.ಇ(ಸೇವೆಗಳು-3),ವಿಧಾನ ಸೌಧ,ಬೆಂಗಳೂರು.
15. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ,ಬೆಂಗಳೂರು.
16. ನಿರ್ದೇಶಕರು(ಪ್ರಾಥಮಿಕ)ಮತ್ತು (ಪ್ರೌಢ ಶಿಕ್ಷಣ),ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
17. ಉಪನಿರ್ದೇಶಕರ(ಯೋಜನೆ),(ಈಶಾನ್ಯವಲಯ) ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
19. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳು.
20. ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು.
21. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು,ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರ ಕನ್ನಡ, ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು.
22. ಮುಖ್ಯ ಲೆಕ್ಕಾಧಿಕಾರಿಗಳು,ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರ ಕನ್ನಡ, ಬಿಜಾಪುರ, ಬಾಗಲಕೋಟೆ ಗುಲ್ಬರ್ಗಾ, ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು.
23. ಖಜಾನಾಧಿಕಾರಿಗಳು,ಬೆಳಗಾಂ,ಧಾರವಾಡ,ಗದಗ್,ಹಾವೇರಿ,ಉತ್ತರ ಕನ್ನಡ, ಬಿಜಾಪುರ, ಬಾಗಲಕೋಟೆ ಗುಲ್ಬರ್ಗಾ, ಬೀದರ್,ರಾಯಚೂರು,ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳು.
24. ಖಜಾನಾಧಿಕಾರಿಗಳು,ರಾಜ್ಯ ಹುಜೂರು ಖಜಾನೆ,ಬೆಂಗಳೂರು.
25. ಉಪ ನಿರ್ದೇಶಕರು,ನೆಟ್‌ವರ್ಕ್ ಮ್ಯಾನೇಜ್‌ಮೆಂಟ್, ಖನಿಜ ಭವನ,ನಂ.49,ರೇಸ್‌ಕೋರ್ಸ್ ರಸ್ತೆ,ಬೆಂಗಳೂರು.
26. ಖಜಾನಾ ನಿರ್ದೇಶಕರು, ಪೋಡಿಯಂ ಬ್ಲಾಕ್,ಡಾ:ಅಂಬೇಡ್ಕರ್ ರಸ್ತೆ,ಬೆಂಗಳೂರು.
27. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು 1 ಮತು 2,ಶಿಕ್ಷಣ ಇಲಾಖೆ.
28. ಸರ್ಕಾರದ ಸಹ ಕಾರ್ಯದರ್ಶಿಗಳು,(ಉನ್ನತ ಶಿಕ್ಷನ), ಶಿಕ್ಷಣ ಇಲಾಖೆ.
29. ಸರ್ಕಾರದ ಅಧೀನ ಕಾರ್ಯದರ್ಶಿಗಳು,ಪ್ರಾಥಮಿಕ ಶಿಕ್ಷಣ/ಪ್ರೌಢ ಶಿಕ್ಷಣ/ಸೇವೆಗಳು1 ಮತ್ತು 2/ಸೇವೆಗಳು-3/ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ/ಸಾಮಾನ್ಯ/ಶಿಕ್ಷಣ ಇಲಾಖೆ.
30. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು(ಉನ್ನತ ಶಿಕ್ಷಣ).
31. ಸರ್ಕಾರದ ಕಾರ್ಯದರ್ಶಿಗಳು(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ)ರವರ ಆಪ್ತ ಸಹಾಯಕರು.
32. ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು(ಯೋಜನೆ) ಶಿಕ್ಷಣ ಇಲಾಖೆರವರ ಆಪ್ತ ಸಹಾಯಕರು.
33. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

mydocuments/north east

**ಸರ್ಕಾರಿ ಆದೇಶ ಸಂಖ್ಯೆ ಇಡಿ 163 ಯೋಯೋಕಾ 2003, ಬೆಂಗಳೂರು, ದಿನಾಂಕ :10-11-2003 ಕ್ಕೆ ಅನುಬಂಧ-1**

**ಧಾರವಾಡ ಮತ್ತು ಗುಲ್ಬರ್ಗ ಸಾರ್ವಜನಿಕ ಶಿಕ್ಷಣ ಆಯುಕ್ತಾಲಯಗಳಿಗೆ ಹೊಸದಾಗಿ ಸೃಜಿಸಲಾದ ವಿವಿಧ ಪ್ರವರ್ಗಗಳ ಹುದ್ದೆಗಳ ವಿವರ:-**

(ಸೃಜಿಸಲಾದ ಹುದ್ದೆಗಳ ಸಂಖ್ಯೆ)

| ಕ್ರಮ ಸಂಖ್ಯೆ | ವೃಂದ | ಹುಬ್ಬಳ್ಳಿ ಆಯುಕ್ತರ ಕಚೇರಿ | ಗುಲ್ಬರ್ಗಾ ಆಯುಕ್ತರ ಕಚೇರಿ |
|---|---|---|---|
| 1. | ಅಪರ ಆಯುಕ್ತರು | 1 | 1 |
| 2. | ನಿರ್ದೇಶಕರು | 1 | - |
| 3. | ಸಹ ನಿರ್ದೇಶಕರು | 1 | 1 |
| 4. | ಉಪ ನಿರ್ದೇಶಕರು | 2 | 1 |
| 5. | ಮುಖ್ಯ ಲೆಕ್ಕಾಧಿಕಾರಿಗಳು | 1 | 1 |
| 6. | ಸಾರ್ವಜನಿಕ ಸಂಪರ್ಕಾಧಿಕಾರಿ | 1 | - |
| 7. | ಕಿರಿಯ ಸಂಶೋಧನಾಧಿಕಾರಿ | 1 | - |
| 8. | ಯೋಜನಾ ಸಹಾಯಕರು | 1 | 1 |
| 9. | ಕಲಾಕಾರರು | 1 | 1 |
| 10. | ಕಂಪ್ಯೂಟರ್ ಅನಾಲಿಸ್ಟ್ | 1 | 1 |
| | ಒಟ್ಟು | 11 | 7 |

(ಕೆ. ಶ್ರೀಕಂಠೇಶ್ವರ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ),
ಶಿಕ್ಷಣ ಇಲಾಖೆ.

## ಸರ್ಕಾರಿ ಆದೇಶ ಸಂಖ್ಯೆ ಇಡಿ 163 ಯೋಯೋಕಾ 2003, ಬೆಂಗಳೂರು, ದಿನಾಂಕ :10-11-2003 ಕ್ಕೆ ಅನುಬಂಧ-2

### ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಾರ್ಯಾಲಯದಿಂದ ಧಾರವಾಡ ಮತ್ತು ಗುಲ್ಬರ್ಗಾ ಆಯುಕ್ತಾಲಯಗಳಿಗೆ (ಕಮೀಷನರೇಟ್)ಕ್ಕೆ ವರ್ಗಾಯಿಸಲಾದ ವಿವಿಧ ಪ್ರವರ್ಗಗಳ ಹುದ್ದೆಗಳ ವಿವರ

| ಕ್ರ. ಸಂ | ವೃಂದ | ಹಾಲಿ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಲಭ್ಯವಿರುವ ಹುದ್ದೆಗಳು | ಇದರಲ್ಲಿ ಧಾರವಾಡದ ಆಯುಕ್ತಾಲಯಕ್ಕೆ ವರ್ಗಾಯಿಸಲಾದ ಹುದ್ದೆಗಳು | ಗುಲ್ಬರ್ಗಾ ಆಯುಕ್ತಾಲಯಕ್ಕೆ ವರ್ಗಾಯಿಸಲಾದ ಹುದ್ದೆಗಳು |
|---|---|---|---|---|
| 1 | ಹಿರಿಯ ಸಹಾಯಕ ನಿರ್ದೇಶಕರು | 10 | 2 | 2 |
| 2 | ಸಹಾಯಕ ನಿರ್ದೇಶಕರು | 10 | 3 | 2 |
| 3 | ಅಧೀಕ್ಷಕರು (ಲೆಕ್ಕ ಪತ್ರ ಅಧೀಕ್ಷಕರೂ ಸೇರಿದಂತೆ) ಮತ್ತು ಸಹಾಯಕ ಸಾಂಖ್ಯಿಕ ಅಧಿಕಾರಿ | 29+3=32 | 14* | 6* |
| 4 | ಪ್ರಥಮ ದರ್ಜೆ ಸಹಾಯಕರು (ಶೀಘ್ರಲಿಪಿಗಾರರೂ ಸೇರಿದಂತೆ) | 108 | 31* | 15* |
| 5 | ದ್ವಿತೀಯ ದರ್ಜೆ ಸಹಾಯಕರು/ ಬೆರಳಚ್ಚುಗಾರರು/ ಕಂಪ್ಯೂಟರ್ ಪ್ರೋಗ್ರಾಮರ್‌ಗಳು | 68 | 24* | 11* |
| 6 | ಗುಮಾಸ್ತ ಸಹಿತ ಬೆರಳಚ್ಚುಗಾರರು | 8 | 2 | 2 |
| 7 | ದಲಾಯತ್ / ಗ್ರೂಪ್ ಡಿ | 42 | 10 | 8 |
| 8 | ಚಾಲಕರು | 12 | 3 | 2 |
| | ಒಟ್ಟು | 298 | 89 | 48 |

ಗಮನಿಸಿ:

* ಸಮನಾಂತರ ಹುದ್ದೆಗಳಲ್ಲಿ ಅಗತ್ಯವಿರುವಷ್ಟು ಹುದ್ದೆಗಳನ್ನು ಲೆಕ್ಕಪತ್ರ ಅಧೀಕ್ಷಕರು/ಸಹಾಯಕ ಸಾಂಖ್ಯಿಕ ಅಧಿಕಾರಿಗಳು ಶೀಘ್ರಲಿಪಿಗಾರರು ಹಾಗೂ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳಾಗಿ ಪರಿವರ್ತಿಸಲು ಅನುಮೋದನೆ ನೀಡಿದೆ.

( ಕೆ. ಶ್ರೀಕಂಠೇಶ್ವರ )
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ(ಯೋಜನೆ)
ಶಿಕ್ಷಣ ಇಲಾಖೆ.